# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 714

2) ಸದಸ್ಯರ ಹೆಸರು : ಶ್ರೀ ಎಂ.ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು)

3) ಉತ್ತರಿಸಬೇಕಾದ ದಿನಾಂಕ : 21-02-2024

4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

<table>
<tr><th></th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿರುವ ಮೀನುಗಾರಿಕೆ ಬಂದರುಗಳ ಸಂಖ್ಯೆ ಎಷ್ಟು; ಈ ಬಂದರುಗಳ ನಿರ್ವಹಣೆಗಾಗಿ ವಾರ್ಷಿಕ ಎಷ್ಟು ಖರ್ಚು ಮಾಡಲಾಗಿದೆ;<br>(ಕಳೆದ ಮೂರು ವರ್ಷಗಳ ಮಾಹಿತಿ ನೀಡುವುದು)</td><td>ರಾಜ್ಯದಲ್ಲಿ ಉಡುಪಿ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಸೇರಿದಂತೆ ಒಟ್ಟು 09 ಮೀನುಗಾರಿಕೆ ಬಂದರುಗಳು ಇವೆ. ಈ ಬಂದರುಗಳ ನಿರ್ವಹಣೆಗಾಗಿ ಕಳೆದ 3 ವರ್ಷಗಳಲ್ಲಿ ಈ ಕೆಳಕಂಡಂತೆ ಖರ್ಚು ಮಾಡಲಾಗಿರುತ್ತದೆ.<br>1) 2020-2021 - ರೂ.1,21,41,901-00<br>2) 2021-2022 - ರೂ.1,60,59,753-00<br>3) 2022-2023 - ರೂ. 60,40,181-00</td></tr>
<tr><td>ಆ)</td><td>ಮೀನುಗಾರಿಕೆ ಇಲಾಖೆಯಲ್ಲಿ ಮಂಜೂರಾಗಿರುವ ಅಧಿಕಾರಿಗಳ ಹುದ್ದೆ ಎಷ್ಟು; ಖಾಲಿ ಇರುವ ಹುದ್ದೆಗಳು ಎಷ್ಟು; ಇವುಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;</td><td>ಮೀನುಗಾರಿಕೆ ಇಲಾಖೆಯಲ್ಲಿ ಈ ಕೆಳಕಂಡಂತೆ ಅಧಿಕಾರಿಗಳ ಹುದ್ದೆಗಳು ಮಂಜೂರಾಗಿರುತ್ತವೆ ಮತ್ತು ಖಾಲಿ ಇರುತ್ತವೆ.<br><table><tr><th>ವೃಂದ</th><th>ಮಂಜೂರಾದ ಹುದ್ದೆಗಳು</th><th>ಖಾಲಿ ಹುದ್ದೆಗಳು</th></tr><tr><td>ಗ್ರೂಪ್-ಎ</td><td>47</td><td>6</td></tr><tr><td>ಗ್ರೂಪ್-ಬಿ</td><td>234</td><td>75</td></tr></table><br>ಖಾಲಿ ಇರುವ ಗ್ರೂಪ್-ಬಿ ವೃಂದದ 67 ಮೀನುಗಾರಿಕೆ ಸಹಾಯಕ ನಿರ್ದೇಶಕರ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧದ ಪ್ರಸ್ತಾವನೆಯು ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ. ಕಲ್ಯಾಣ ಕರ್ನಾಟಕ ಭಾಗದ 4 ಹುದ್ದೆಗಳಿಗೆ ಕರ್ನಾಟಕ ಲೋಕಸೇವಾ ಆಯೋಗದಿಂದ ಆಯ್ಕೆಪಟ್ಟಿ ಸ್ವೀಕೃತಗೊಂಡಿದ್ದು, ನೇಮಕಾತಿ ಆದೇಶ ಹೊರಡಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ.</td></tr>
<tr><td>ಇ)</td><td>ಮೀನುಗಾರಿಕೆ ಇಲಾಖೆಯ ಅಡಿಯಲ್ಲಿ ಒಟ್ಟು ಎಷ್ಟು ಕೆರೆಗಳು ಇವೆ; (ಜಿಲ್ಲಾವಾರು ಮಾಹಿತಿ ನೀಡುವುದು); ಈ ಕೆರೆಗಳನ್ನು ಮೀನುಗಾರರ ಸಹಕಾರ ಸಂಘಗಳಿಗೆ ಯಾವ ಮಾನದಂಡದ ಮೇಲೆ ಗುತ್ತಿಗೆಯನ್ನು ನೀಡಲಾಗುತ್ತಿದೆ? (ವಿವರ ನೀಡುವುದು).</td><td>ಸಣ್ಣ ನೀರಾವರಿ ಇಲಾಖೆಗೆ ಸೇರಿದ ಒಟ್ಟು 4035 ಕೆರೆಗಳು ಇದ್ದು, ಜಿಲ್ಲಾವಾರು ಮಾಹಿತಿಯನ್ನು <u>ಅನುಬಂಧ-1</u> ರಲ್ಲಿ ಒದಗಿಸಲಾಗಿದೆ.<br><br>ಕೆರೆಗಳ ಮೀನು ಪಾಶುವಾರು ಹಕ್ಕನ್ನು ಮೀನುಗಾರರ ಸಹಕಾರ ಸಂಘಗಳಿಗೆ ಗುತ್ತಿಗೆ ನೀಡುವಾಗ ಸರ್ಕಾರದ ಆದೇಶ ಸಂಖ್ಯೆ: ಪಸಂಮೀ/125/ಮೀಇಇ/2013 ದಿನಾಂಕ: 21-02-2014ರ ಅನುಬಂಧದಲ್ಲಿ ನಿಗಧಿಪಡಿಸಲಾಗಿರುವ ಅರ್ಹತೆ ಮತ್ತು ಮಾನದಂಡಗಳಡಿಯಲ್ಲಿ ಗುತ್ತಿಗೆ ನೀಡಲು ಕ್ರಮವಹಿಸಲಾಗುತ್ತಿದ್ದು, ಮಾಹಿತಿಯನ್ನು <u>ಅನುಬಂಧ-2</u> ರಲ್ಲಿ ಒದಗಿಸಲಾಗಿದೆ.</td></tr>
</table>

ಸಂಖ್ಯೆ: ಪಸಂಮೀ ಇ-36 ಮೀಇಯೋ 2024

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

**ಶ್ರೀ.ಎಂ.ನಾಗರಾಜು, ವಿಧಾನಪರಿಷತ್ತು ಸದಸ್ಯರು (ವಿಧಾನಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ-714 ರ ಪ್ರಶ್ನಾವಳಿಯ ಕ್ರ.ಸಂ-3 ಕೆ ಸಂಬಂಧಿಸಿದಂತೆ ಅನುಬಂಧ-1**

| ಕ್ರ.ಸಂ | ಜಿಲ್ಲೆ | ಇಲಾಖೆ ಕರೆ |
|---|---|---|
| 1 | ಬಳ್ಳಾರಿ | 102 |
| 2 | ಬೆಳಗಾವಿ | 222 |
| 3 | ಚಿಕ್ಕಬಳ್ಳಾಪುರ | 214 |
| 4 | ಧಾರವಾಡ | 128 |
| 5 | ಕೊಪ್ಪಳ | 52 |
| 6 | ಉತರ ಕನ್ನಡ | 88 |
| 7 | ವಿಜಯನಗರ | 83 |
| 8 | ಉಡುಪಿ | 7 |
| 9 | ಕಲಬುರಗಿ | 82 |
| 10 | ಕೊಡಗು | 9 |
| 11 | ಕೋಲಾರ | 146 |
| 12 | ಗದಗ | 42 |
| 13 | ಚಾಮರಾಜನಗರ | 91 |
| 14 | ಚಿಕ್ಕಮಗಳೂರು | 128 |
| 15 | ಚಿತ್ರದುರ್ಗ | 169 |
| 16 | ತುಮಕೂರು | 401 |
| 17 | ದಾವಣಗೆರೆ | 94 |
| 18 | ಬಾಗಲಕೋಟೆ | 47 |
| 19 | ಬೆಂಗಳೂರು (ಗ್ರಾ). | 103 |
| 20 | ಬೆಂಗಳೂರು (ನ) | 196 |
| 21 | ಮಂಡ್ಯ | 177 |
| 22 | ಮೈಸೂರು | 98 |
| 23 | ಯಾದಗಿರಿ | 74 |
| 24 | ರಾಮನಗರ | 124 |
| 25 | ರಾಯಚೂರು | 80 |
| 26 | ಬಿಜಾಪುರ | 160 |
| 27 | ಶಿವಮೊಗ್ಗ | 446 |
| 28 | ಹಾವೇರಿ | 202 |
| 29 | ಹಾಸನ | 178 |
| 30 | ದಕ್ಷಿಣ ಕನ್ನಡ | 0 |
| 31 | ಬೀದರ್ | 92 |
| | | **4035** |

**ಶ್ರೀ.ಎಂ.ನಾಗರಾಜು, ವಿಧಾನಪರಿಷತ್ತು ಸದಸ್ಯರು (ವಿಧಾನಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ-714 ರ ಪ್ರಶ್ನಾವಳಿಯ ಕ್ರ.ಸಂ-3 ಕ್ಕೆ ಸಂಬಂಧಿಸಿದಂತೆ ಅನುಬಂಧ-2**

**ಆದೇಶ ಸಂಖ್ಯೆ/ಪಸಂಮೀ/125/ಮೀಇಇ/2013 ಬೆಂಗಳೂರು ದಿನಾಂಕ:21.02.2014 ರಂತೆ ಮೀನುಗಾರರ ಸಹಕಾರ ಸಂಘಗಳು ಒಳನಾಡು ಜಲಸಂಪನ್ಮೂಲದ ಮೀನುಪಾಶುವಾರು ಹಕ್ಕನ್ನು ಗುತ್ತಿಗೆಗೆ ಪಡೆಯಲು ಇರಬೇಕಾದ ಅರ್ಹತೆಗಳ ಕುರಿತಾದ ಮಾನದಂಡಗಳ ವಿವರ**

1) ಗುತ್ತಿಗೆ ಕೋರಿರುವ ಮೀನುಗಾರರ ಸಹಕಾರ ಸಂಘವು, ಹಾಲಿ ಕಾರ್ಯನಿರ್ವಹಿಸುತ್ತಿರಬೇಕು, ಬರ್ಖಾಸ್ತು (ಸೂಪರ್‌ಸೀಡ್) ಆಗಿರಬಾರದು. ಹಾಗೂ ಕರ್ನಾಟಕ ಸಹಕಾರಿ ಕಾಯ್ದೆಯನ್ವಯ ನಿಯಮಾನುಸಾರ ಆಡಳಿತ ಮಂಡಳಿಯ ಸಭೆಗಳನ್ನು ಮತ್ತು ಮಹಾಸಭೆಗಳನ್ನು ನಡೆಸಿರಬೇಕು.

2) ಗುತ್ತಿಗೆ ಕೋರಿರುವ ಜಲಸಂಪನ್ಮೂಲವು ಮೀನುಗಾರರ ಸಹಕಾರಿ ಸಂಘದ ಕಾರ್ಯವ್ಯಾಪ್ತಿಯಲ್ಲಿರಬೇಕು.

3) ಕರ್ನಾಟಕ ಸಹಕಾರಿ ಕಾಯ್ದೆಯನ್ವಯ ಸಹಕಾರಿ ಸಂಘವು ಚುನಾವಣೆಯನ್ನು ನಡೆಸಿರಬೇಕು ಮತ್ತು ಆಡಳಿತ ಮಂಡಳಿ ರಚನೆಯಾಗಿರಬೇಕು.

4) ಸಂಘವು ಕಳೆದ 5 ವರ್ಷಗಳ ಅವಧಿಯಲ್ಲಿ ಯಾವುದಾದರೂ ಮೂರು ವರ್ಷಗಳ ಲೆಕ್ಕ ಪರಿಶೋಧನಾ ವರದಿಯನ್ನು ಸಹಕಾರಿ ಇಲಾಖೆ ನಡೆಸಿದ ಮತ್ತು ಅವುಗಳ ಅನುಪಾಲನಾ ವರದಿಯನ್ನು ಸಲ್ಲಿಸಬೇಕು.

5) ಈ ಹಿಂದೆ ಸಂಘವು ಕೆರೆಗಳನ್ನು ಗುತ್ತಿಗೆಗೆ ಪಡೆದಿದ್ದಲ್ಲಿ ಹಿಂದಿನ 5 ವರ್ಷಗಳ ಅವಧಿಯಲ್ಲಿ ಕನಿಷ್ಠ 2 ವರ್ಷಗಳಲ್ಲಿ ಸಂಘವು ಲಾಭದಲ್ಲಿರಬೇಕು. ನಷ್ಟದಲ್ಲಿರುವ ಸಹಕಾರ ಸಂಘ ಗುತ್ತಿಗೆ ಪಡೆಯಲು ಅನರ್ಹವಾಗುತ್ತದೆ.

6) ಸಂಘವು ಗುತ್ತಿಗೆಗೆ ಕೋರುತ್ತಿರುವ ಜಲಸಂಪನ್ಮೂಲದಲ್ಲಿ ಪ್ರತಿ ಹೆಕ್ಟೇರ್ ಉಪಯುಕ್ತತಾ ಜಲವಿಸ್ತೀರ್ಣಕ್ಕೆ ಕನಿಷ್ಟ 2000 ಬಲಿತ ಬಿತ್ತನೆ ಮೀನುಮರಿಗಳನ್ನು ಬಿತ್ತನೆ ಮಾಡಲು / ಖರೀದಿಸಲು ಬೇಕಾದ ಮೊತ್ತ ಮತ್ತು ಕೆರೆಯ ಗುತ್ತಿಗೆ ಮೊತ್ತ ಮತ್ತು ಭದ್ರತಾ ಠೇವಣಿ ಮೊತ್ತವನ್ನು ಪಾವತಿಸಲು ಬೇಕಾದ ಮೊತ್ತವು ಅದರ ಚಾಲ್ತಿ ಖಾತೆಯಲ್ಲಿರಬೇಕು. ಆರ್ಥಿಕ ಸ್ಥಿತಿಯನ್ನು ದೃಢೀಕರಿಸಲು ಸಂಘದ ಬ್ಯಾಂಕ್ ಖಾತೆಯ ಪಾಸ್ ಪುಸ್ತಕದ ದೃಢೀಕೃತ ಪ್ರತಿ ಸಲ್ಲಿಸಬೇಕು.

7) ಸಂಘದ ನೋಂದಣಿ ಪತ್ರ, ಬೈಲಾ ಪ್ರತಿ, ಸಂಘದ ಆಡಳಿತ ಮಂಡಳಿ ಸದಸ್ಯರ ಪಟ್ಟಿ, ಈ ಹಿಂದೆ ಗುತ್ತಿಗೆಗೆ ಪಡೆದಿದ್ದ ಜಲಸಂಪನ್ಮೂಲದಲ್ಲಿ ಬಿತ್ತನೆ ಮಾಡಲಾದ ಮೀನುಮರಿಗಳು, ಹಿಡುವಳಿ ಮಾಡಲಾದ ಪ್ರಮಾಣ ಮತ್ತು ಗಳಿಸಿದ ಆದಾಯದ ವಿವರಗಳನ್ನು ಸಲ್ಲಿಸಬೇಕು. ಜಲಸಂಪನ್ಮೂಲದ ಗುತ್ತಿಗೆ ಮೊತ್ತವನ್ನು ಮತ್ತು ಠೇವಣಿ ಮೊತ್ತವನ್ನು ಮುಂಗಡವಾಗಿ ಡಿ.ಡಿ. ಮುಖಾಂತರ ಪಾವತಿಸಬೇಕು.

8) ಸಂಘದಿಂದ ಸರ್ಕಾರಕ್ಕೆ ಬರಬೇಕಾದ ಬಾಕಿ ವಿವರ ಸಲ್ಲಿಸಬೇಕು (ಸಾಲ ಮತ್ತು ಷೇರು ಬಂಡವಾಳ ಇತ್ಯಾದಿ) ಸುಸ್ತಿಯಲ್ಲಿರುವ ಸಹಕಾರ ಸಂಘ, ಗುತ್ತಿಗೆಯನ್ನು ಪಡೆಯಲು ಅನರ್ಹವಾಗುತ್ತದೆ.

9) ಸಂಘವು ಜಲಸಂಪನ್ಮೂಲದ ಗುತ್ತಿಗೆಯನ್ನು ಕೋರಿರುವ ಆಡಳಿತ ಮಂಡಳಿಯ ನಡವಳಿಯ (ಠರಾವು) ನೋಟರೀಕರಿಸಿದ ಪ್ರತಿಯನ್ನು ಸಲ್ಲಿಸಬೇಕು.

10) ಹೊಸದಾಗಿ ನೋಂದಾಯಿಸಲ್ಪಟ್ಟ ಮೀನುಗಾರರ ಸಹಕಾರ ಸಂಘ/ಸಂಸ್ಥೆಗಳು ನೋಂದಾಯಿಸಲ್ಪಟ್ಟ ದಿನಾಂಕದಿಂದ ಜಲಸಂಪನ್ಮೂಲಗಳ ಮೀನುಪಾಶುವಾರು ಹಕ್ಕನ್ನು ಗುತ್ತಿಗೆಗೆ ಪಡೆಯಲು ಅರ್ಹತೆಯನ್ನು ಹೊಂದುತ್ತವೆ.

ಮೇಲ್ಕಾಣಿಸಿದ ಅರ್ಹತೆಗಳನ್ನು ಹೊಂದಿದಲ್ಲಿ ಮತ್ತು ದಾಖಲಾತಿಗಳನ್ನು ಒದಗಿಸಿದಲ್ಲಿ ಮಾತ್ರ ಮೀನುಗಾರರ ಸಹಕಾರ ಸಂಘವು ಕೆರೆಯ ಮೀನುಪಾಶುವಾರು ಹಕ್ಕನ್ನು ಪಡೆಯಲು ಅರ್ಹತೆ ಹೊಂದುತ್ತದೆ.